ಗುಂಡಪ್ಪನವರ ಜಿಂದಗೀ ಬಗ್ಯಾಗಿ ಬರತಕ್ಕ 300 ರೂಪಾಯಿಗಳ ಸಾಲವನ್ನು ವಸೂಲ್‌ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾದ ಮಾದಮ್ಮನವರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 31ರಲ್ಲ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುಂಡಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿದೆ.

1887ನೇ ಯಿಸವಿ ಸಿಪ್ಟಂಬರು ತಿಂಗಳು 24ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಯಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ.

ಹಾಸನ ಡಿಸ್ಟ್ರಿಕ್ಟು.

ತಾರೀಖು 7ನೇ ಅಕ್ಟೋಬರ್ 1887.

ಹಾಸನ ಡಿಸ್ಟ್ರಿಕ್ಟು ಮಂಜರಾಬಾದ್ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ೭ವಾರಸ್ ದಸ್ತಾವೇಜುಗಳನ್ನು ಕ್ರಮ ಪ್ರಕಾರ ವಾರಸ್‌ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು. ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ:—

ದಸ್ತಾವೇಜಿನ ನಂಬರ್.	ರಿಜಿಸ್ಟ್ರೇಷನ್‌ಗೆ ಹಾಜರ್ ಮಾಡಿದ ತಾರೀಖು.	ಬರದುಕೊಟ್ಟವರು ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಿಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
11 1883—84	21 4 83	21 4 83	21 4 83	ಚಿಕ್ಕನಾಯನಹಳ್ಳಿ ಬಲಗೈ ಲಾಳಿಮಗ ಲಕ್ಕ	ಚಿಕ್ಕನಾಯಕನಹಳ್ಳಿ ಬಸವೇಗೌಡ	(80) ರೂಪಾಯಿನ ಕ್ರಯಪತ್ರ.
79 1883—84	27 9 83	27 9 83	27 9 83	ಹೊಂಗಡಹಳ್ಳದ ಬಲಗೈ ಬೆಂಬ್ಬನಹಳ್ಳಿ ತಿಪ್ಪನಮಕ್ಕಳು ದೊಂಬೆಮಲ್ಲ ಮತ್ತು ಕೆರಚ ಸಹ	ಹೊಂಗಡಹಳ್ಳದ ಮಂಜೇಗೌಡ	(100) ರೂಪಾಯಿನ ಕ್ರಯಪತ್ರ.
14 1884—85	11 4 84	11 4 84	12 4 84	ಬೈಕೆರೆ ಮಹಂತಗೌಡನ ಮಕ್ಕಳು ನಂಜೇಗೌಡ 1, ಅಂಚೇಗೌಡ 2, ಶಿವೇಗೌಡ 3, ಕೊಮಾರಗೌಡ 4 ವುರಫ್ ಪುಟ್ಟಸಾಮಿಗೌಡ ಸಹ	ಬೈಕೆರೆ ಮಹಂತಗೌಡನ ಮಕ್ಕಳು ಅಂಚೇಗವುಡ 1 ಶಿವೇಗೌಡ 2, ಕೊಮಾರಗೌಡ 3 ವುರಫ್ ಪುಟ್ಟಸಾಮಿಗೌಡ ನಂಜೇಗೌಡ 4 ಸಹ	(150) ರೂಪಾಯಿ ಕ್ರಯಬಾಳತಕ್ಕ ಸ್ವತ್ತುಗಳ ಬಾಬತು ಪಾಲು ಪಾರೀಖತ್ತು.
42 1884—85	26 6 84	26 6 84	26 6 84	ಮಂಜರಾಬಾದ್ ತಾಲ್ಲೂಕು ಮಾವಿನಕೋಲು ಗ್ರಾಮದಲ್ಲಿರುವ ಬಸವೇಗೌಡನ ಮಗ ನಂಜೇಗೌಡ	ಹಾಸನ ತಾಲ್ಲೂಕುಬಾಂಮಸವಳ್ಳೀ ಗ್ರಾಮದ ಈರೇಗವುಡನ ಮಗ ನಿರ್ವಾಣಿಗವುಡ	(50) ರೂಪಾಯಿನ ಭೋಗ್ಯಪತ್ರ.

ಪಿ. ಎಸ್. ಪೂರ್ಣಯ್ಯ.
ರೆಜಿಸ್ಟ್ರಾರ್.